ಮಂತ್ರೂರಿನ ನೀರಾವರಿ ಕಾಲುವೆಯಂ ದುರಸ್ತಿ

೧೫೬೨. ಶ್ರೀ ರಾವಂನಾಥ ರೈ (ಬಂಟ್ವಾಳ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ಕ್ಷೇತ್ರದ ಮೂತ್ರೂರು ಎಂಬಲ್ಲಿರುವ ಒಂದು ನೀರಾವರಿ ಕಾಲುವೆಯು ಅತಿ ಕ್ಷೀಣಾವಸ್ಥೆಯಲ್ಲಿದ್ದು ವರ್ಷ ಪ್ರತಿ ದುರಸ್ತಿಗೊಳಪಡಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸದರಿ ಕಾಲುವೆಯನ್ನು ಶಾಶ್ವತವಾಗಿ ದುರಸ್ತಿಗೊಳಿಸಲು ಸರ್ಕಾರದವರು ಕ್ರಮ ಕೈ ಕೊಳ್ಳುವರೆ?

ಇ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಸಂಡೂರು ಕ್ಷೇತ್ರದಲ್ಲಿ ಹೊಸ ಕೆರೆಗಳನ್ನು ಕಟ್ಟಿಸುವ ಬಗ್ಗೆ

೧೫೬೮. ಶ್ರೀ ಯಂ ಭೂಪತಿ (ಸಂಡೂರು).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ಕ್ಷೇತ್ರದ (ಹೊಸಪೇಟೆ ತಾಲ್ಲೂಕಿನ) ಪಾಪಿನಾಯಕನ ಹಳ್ಳಿ, ಗುಂಡಲವದ್ದೀಗೇರಿ ಗ್ರಾಮದಲ್ಲಿ ಎರಡು ಕೆರೆಗಳನ್ನು ಕಟ್ಟಲು ಸಾಧ್ಯವಿದೆ, ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪಾಪಿನಾಯಕನ ಹಳ್ಳಿ, ಚೆಟ್ಟಿಕೆರೆ ಹಾಗೂ ಗುಂಡಲವದ್ದೀಗೇರಿಯ ಕೆರೆಯನ್ನು ಕಟ್ಟಿಸಿ ಅಲ್ಲಿನ ರೈತರಿಗೆ ಶಾಶ್ವತ ಪರಿಹಾರ ಒದಗಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಈ ಎರಡು ಕೆರೆಗಳ ವಿವರವಾದ ಅನ್ವೇಷಣೆಯು ನಡೆಯುಬೇಕಾಗಿದೆ.

ಆ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಉಚಿತ ಬಿದಿರು ಬೆತ್ತ ನೀಡುವ ಬಗ್ಗೆ

೧೫೮೮. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಬಡ ಪರಿಶಿಷ್ಟ ಜಾತಿ ಜನಾಂಗದ ಕುಲಕಸುಬುದಾರರಿಗೆ ಅರಣ್ಯದಿಂದ ಉಚಿತ ಹಸಿ ಬಿದಿರು ಬೆತ್ತ ಬಿದಗಣೆಯ ತೊಂದರೆಯನ್ನು ಸರಿಪಡಿಸಲು ಸರ್ಕಾರದವರು ವಿಶೇಷ ಕ್ರಮ ಕೈಗೊಳ್ಳುವರೇ ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ಈಗಾಗಲೆ, ಅನೇಕ ಕ್ಷೇಮಾಭಿವೃದ್ಧಿ ಯೋಜನೆಗಳು ಕಾರ್ಯರೂಪದಲ್ಲಿ ಇದ್ದು ಇಂತಹ ಯೋಜನೆಗಳ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಿದಿರು ಮತ್ತು ಬೆತ್ತ ಗಳನ್ನು ಮುಫತ್ತಾಗಿ ಪೂರೈಸಲಾಗುತ್ತಿದೆ. ವಿಶೇಷ ಘಟಕ ಯೋಜನೆಯ ಕೆಳಗೆ ಪರಿಶಿಷ್ಟ ಜನಾಂಗ ದವರಿಗೂ ಹಾಗೂ ಪರಿಶಿಷ್ಟ ಪಂಗಡದವರ ಕ್ಷೇಮಾಭಿವೃದ್ಧಿ ಉಪ ಯೋಜನೆಯ ಕೆಳಗೆ ಪರಿಶಿಷ್ಟ ಪಂಗಡದವರಿಗೆ ಬಿದಿರು ಮತ್ತು ಬೆತ್ತಗಳನ್ನು ಮುಫತ್ತಾಗಿ ನೀಡಲಾಗುತ್ತಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿರುವ ಕೊಲ್ಲಿತೋಡು ಹೊಳೆ ಬಗ್ಗೆ

೧೭೫೫. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು ಬೇಗೂರು ಮತ್ತು ಹುದಿಕೇರಿ ಗ್ರಾಮದ ಮಧ್ಯ ಇರುವ ಕೊಲ್ಲಿತೋಡು ಹೊಳೆ ಪ್ರತಿ ಮಳೆಗಾಲದಲ್ಲಿ ಉಬ್ಬರದಿಂದ ವ್ಯವಸಾಯದ ಜಮೀನನ್ನು ನಾಶ ಮಾಡುವ ಕಾರಣದಿಂದ ಈ ಹಿಂದೆ ಪ್ರವಾಹ ಪರಿಹಾರ ಯೋಜನೆಯಲ್ಲಿ ಏನಾದರೂ ಸರಿಪಡಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಂಡಿರುವರೆ,

ಆ) ಹಾಗಿದ್ದಲ್ಲಿ ಯಾವ ವರ್ಷ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಜ್ಞೆ ಹೊರಡಿಸಲಾಗಿದೆ, ಹಾಗೂ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಕಾರಣವೇನು,

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಸೂಕ್ತ ಮತ್ತು ಶಾಶ್ವತ ಪರಿಹಾರ ಕ್ರಮ ತೆಗೆದು ಕೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಯಾವ ಆಜ್ಞೆಯನ್ನೂ ಹೊರಡಿಸಿಲ್ಲ. ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳು ಪರಿಶೀಲನೆ ಯಲ್ಲಿವೆ.

ಇ) ಪರಿಶೀಲನೆಯಲ್ಲಿದೆ.

ಘಟಪ್ರಭಾ ಬಲದಂಡೆ ಕಾಲುವೆ ಕೆಲಸ

೨೩೩. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಘಟಪ್ರಭಾ ಬಲದಂಡೆಯ ಕಡಬಗಟ್ಟಿ ಟೇಸಲ್ ಕೆಲಸ ಯಾವಾಗ ಪೂರ್ತಿಯಾಗುವುದು,

ಆ) ಅದಕ್ಕೆ ಇನ್ನೂ ಆಗಲುಬಹುದಾದ ವೆಚ್ಚವೆಷ್ಟು, ಹಾಗೂ ಇಲ್ಲಿಯವರೆವಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ.

ಇ) ಘಟಪ್ರಭಾ ಬಲದಂಡೆ ಕಾಲುವೆ ಗೋಕಾಕ್ ಡಿಸ್ಟ್ರಿಬ್ಯೂಟರಿಯಿಂದ ಯಾವಾಗ ನೀರು ಪೂರೈಕೆಯಾಗಬಹುದು,